ಕ್ರ.ಸಂ.	ಜಿಲ್ಲೆಗಳು	ವಿವರಗಳು	
		ರಚನೆ ಸಂಖ್ಯೆ	ವೆಚ್ಚ (ಲಕ್ಷ ರೂ.ಗಳಲ್ಲಿ)
6.	ಚಾಮರಾಜನಗರ	40	20.21
7.	ಚಿಕ್ಕಮಗಳೂರು	3	7.94
8.	ಚಿತ್ರದುರ್ಗ	79	56.39
9.	ದಕ್ಷಿಣ ಕನ್ನಡ	3	3.94
10.	ಧಾರವಾಡ	3	2.85
11.	ಗುಲ್ಬರ್ಗಾ	9	2.00
12.	ಹಾಸನ	34	29.5
13.	ಕೋಲಾರ	64	101.02
14.	ಕೊಪ್ಪಳ	6	5.18
15.	ಮಂಡ್ಯ	17	6.87
16.	ಮೈಸೂರು	28	19.71
17.	ರಾಯಚೂರು	19	12.59
18.	ಶಿವಮೊಗ್ಗ	7	12.75
19.	ತುಮಕೂರು	64	58.85
20.	ಉತ್ತರ ಕನ್ನಡ	2	2.00
	ಒಟ್ಟು	634	628.39

ಕೊಡಗು ಜಿಲ್ಲೆಯ ರೇಷ್ಮೆ ಇಲಾಖೆಯಿಂದ ಸರ್ಕಾರಕ್ಕೆ ಬರುವ ಆದಾಯ

570(950) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ರೇಷ್ಮೆ ಇಲಾಖೆಯಿಂದ ಸರ್ಕಾರಕ್ಕೆ ಬರುವ ವರಮಾನವೆಷ್ಟು;

(ತಾಲ್ಲೂಕುವಾರು ವಿವರ ಒದಗಿಸಿ)

ಆ) ಈ ವರ್ಷ ಈ ಭಾಗದಲ್ಲಿ ಯಾ ಯಾವ ತಳಿಯ ರೇಷ್ಮೆಯನ್ನು ಉತ್ಪಾದಿಸಲಾಗಿದೆ.

ಇ) ಈ ಜಿಲ್ಲೆಗೆ ರೇಷ್ಮೆ ಮಾರುಕಟ್ಟೆ ಅಭಾವವಿರುವ ವಿಚಾರ ತಿಳಿದಿದೆಯೇ; ತಿಳಿದಿದ್ದಲ್ಲಿ ಈ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ.

ಈ) ಮಾರುಕಟ್ಟೆ ಅಭಾವವಿರುವ ಈ ಭಾಗದಲ್ಲಿ ಮಾರುಕಟ್ಟೆಗಾಗಿ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ.

ಉ) ಈ ಭಾಗದ ರೇಷ್ಮೆ ಉತ್ಪಾದನೆಯ ಪ್ರಮಾಣವೆಷ್ಟು; (ವಿವರ ನೀಡುವುದು)

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ರೇಷ್ಮೆ ಇಲಾಖೆಯ ಗೂಡಿನ ಮಾರುಕಟ್ಟೆಯಲ್ಲಿ ಮಾರುಕಟ್ಟೆ ಶುಲ್ಕದ ಮೂಲಕ ಬರುವ ವರಮಾನದ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಮಡಿಕೇರಿ	-	ಇಲ್ಲ
ಸೋಮವಾರ ಪೇಟೆ	-	0.74 ಲಕ್ಷ
ವೀರಾಜಪೇಟೆ	-	ಇಲ್ಲ

ಆ) ಎನ್‌ಬಿ4ಡಿ2 ಸಿಎಸ್‌ಆರ್2, ಸಿಎಸ್‌ಆರ್4, ಸಿಎಸ್‌ಆರ್ 18 ಮತ್ತು ಸಿಎಸ್‌ಆರ್ 19, ತಳಿಯ ರೇಷ್ಮೆ ಬಿತ್ತನೆ ಗೂಡುಗಳನ್ನು ಉತ್ಪಾದಿಸಲಾಗಿದೆ.

ಇ) ರೇಷ್ಮೆ ಮಾರುಕಟ್ಟೆ ಅಭಾವವಿಲ್ಲ. ಜಿಲ್ಲೆಯನ್ನು ದ್ವಿತಳಿ ಬಿತ್ತನೆ ಪ್ರದೇಶವೆಂದು ಗುರುತಿಸಲಾಗಿದ್ದು, ಕುಶಾಲನಗರದಲ್ಲಿ ಬಿತ್ತನೆ ಗೂಡು ಮಾರುಕಟ್ಟೆ ಸ್ಥಾಪಿಸಲಾಗಿದೆ.

ಈ) ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ವ್ಯವಸಾಯ ಕೇಂದ್ರೀಕೃತವಾಗಿದ್ದು ಈ ತಾಲ್ಲೂಕಿನ ಕುಶಾಲನಗರದಲ್ಲಿ ರೇಷ್ಮೆಗೂಡಿನ ಮಾರುಕಟ್ಟೆ ಆಗಸ್ಟ್ 1991 ರಿಂದ ಕಾರ್ಯನಿರ್ವಹಿಸುತ್ತಿದೆ. ಆದಕಾರಣ ಮಾರುಕಟ್ಟೆಯ ಅಭಾವ ಇರುವುದಿಲ್ಲ.

ಉ) ಕೊಡಗು ಜಿಲ್ಲೆಯನ್ನು ದ್ವಿತಳಿ ಬಿತ್ತನೆ ಪ್ರದೇಶವೆಂದು ಗುರುತಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಉತ್ಪಾದಿಸಲಾದ ಬಿತ್ತನೆ ಗೂಡಿನ ಸಂಖ್ಯೆ ಕೆಳಕಂಡಂತಿದೆ.

2000-01	-	180,61 ಲಕ್ಷ
2000-02	-	160.03 ಲಕ್ಷ
2002-03 (ಜೂನ್ ಅಂತ್ಯದವರೆಗೆ)	-	32.08 ಲಕ್ಷ

ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡಗಳ ನಿರ್ಮಾಣ

571(1083) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಎಷ್ಟು ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಜಿಲ್ಲಾವಾರು ವಿವರ ಒದಗಿಸುವುದು?

ಆ) ಎಷ್ಟು ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ? ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?